ತಾಪತ್ರಯ ಇಲ್ಲ. 13.5.98 ರಂದು ಆರು ಜನ ಸ್ಟೈಕ್ ಮಾಡುತ್ತಿದ್ದರು. 14.5.98 ರಂದು ಸ್ಟೈಕ್ ಮಾಡುವವರು ಮತ್ತೆ ಜಾಸ್ತಿಯಾಗಿದ್ದಾರೆ. ದಯವಿಟ್ಟು ಅವರಿಗೆ ತಿಳಿಸಿ. I will see that some portion of the amount will be cleared.

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ : ನಾನು 33 ದಿವಸಗಳಿಂದ ಕಾಯುತ್ತಿದ್ದೇನೆ. ನೀವು ಅವಕಾಶ ಕೊಡದೆ ಹೋದರೆ ನಾನು ಧರಣಿ ಮಾಡುತ್ತೇನೆ.

ಉಪಾಧ್ಯಕ್ಷರು : ತಮಗೆ ಅವಕಾಶ ಕೊಡುತ್ತೇವೆಂದರೂ ಧರಣಿ ಮಾಡುತ್ತೇವೆಂದರೆ ಏನು ಮಾಡುವುದು? ಲೀಸ್ಟ್ ಪ್ರಕಾರ ನಾನು ಓದುತ್ತಿದ್ದೇನೆ, ತಾವು ಏಕೆ ಆತುರ ಪಡುತ್ತಿದ್ದೀರಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ "ಡಿ" ಗ್ರೂಪಿನ ಹುದ್ದೆಗಳ ಭರ್ತಿ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಗೆ ಸೇರಿದ ವಿವಿಧ ಇಲಾಖೆಗಳಲ್ಲಿ "ಡಿ" ಗುಂಪಿನ ಹುದ್ದೆಗಳು ಬಹಳಷ್ಟು ವರ್ಷಗಳಿಂದ ಖಾಲಿ ಇವೆ. ವೆನ್‌ಲಾಕ್ ಆಸ್ಪತ್ರೆಯಲ್ಲಿ 78, ಲೇಡಿ ಗೌಸಿಯಾ ಆಸ್ಪತ್ರೆಯಲ್ಲಿ ಸುಮಾರು 21, ಟಿಬಿ ಆಸ್ಪತ್ರೆಯಲ್ಲಿ 10, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 113 'ಡಿ' ವರ್ಗದ ಹುದ್ದೆಗಳು ಖಾಲಿ ಇವೆ. ಒಟ್ಟು 847 ಮಂಜೂರಾದ ಹುದ್ದೆಗಳಲ್ಲಿ 625 ಸೇರಿಕೊಂಡು, ಸುಮಾರು 222ಹುದ್ದೆಗಳು ಖಾಲಿ ಇವೆ. ಇದರಿಂದ ಬಹಳಷ್ಟು ತೊಂದರೆಗಳಾಗುತ್ತಿವೆ. ಜೊತೆಗೆ ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರದ ಪರೀಕ್ಷೆ ಮಾಡುವ ಒಂದು ಕೊಠಡಿ ಇದೆ ಬಹಳಷ್ಟು ವರ್ಷಗಳಿಂದ ದುರಸ್ತಿಯಾಗಿಲ್ಲ. ಅಲ್ಲಿ ಸಮುದ್ರ ಹತ್ತಿರವಿರುವುದರಿಂದ ಎಲ್ಲಾ ಬಂದು ಅಲ್ಲಿಯೇ ಸಾಯುತ್ತಿದ್ದಾರೆ. ಈ ಶವವನ್ನು ತೆಗೆದುಕೊಂಡು ಹೋಗಿ ಅಲ್ಲಿಟ್ಟರೆ ಏಳು ಗಂಟೆ ನಂತರ ಪೋಸ್ಟ್ ಮಾರ್ಟಮ್ ಮಾಡುವುದಿಲ್ಲ. ರಾತ್ರಿ ನಾಯಿ ಬೆಕ್ಕುಗಳು ಬಂದು ಅದನ್ನೆಲ್ಲಾ ತಿನ್ನುತ್ತಿವೆ. ಆದ್ದರಿಂದ ದಯವಿಟ್ಟು ಇದಕ್ಕೆ ಅನುದಾನ ಬಿಡುಗಡೆ ಮಾಡಬೇಕು, ಹಾಗೂ ನಾಲ್ಕು ಗಂಟೆಯ ನಂತರ ಬಂದವನ್ನೂ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು) : ಆ ಜಿಲ್ಲೆಯಲ್ಲಿರತಕ್ಕಂತಹ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಹಾಗೂ ರಾಜ್ಯಾದ್ಯಂತ ಖಾಲಿ ಇರತಕ್ಕಂತಹ ಹುದ್ದೆಗಳನ್ನು ತುಂಬುವುದಕ್ಕೆ ನಾವು ಈಗಾಗಲೇ ಕಾರ್ಯ ಪ್ರಾರಂಭ ಮಾಡಿದ್ದೇವೆ. ಮತ್ತು ಸುಮಾರು 200 ಗ್ರೂಪ್ 'ಡಿ' ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ, ಬೇರೆ ಬೇರೆ ಇಲಾಖೆಗಳಿಂದ ಜಿಲ್ಲಾಧಿಕಾರಿಗಳು ಆರೋಗ್ಯ ಇಲಾಖೆಗೆ ನೇಮಕಾತಿಗಳನ್ನು ಕೊಡುತ್ತಿದ್ದಾರೆ, ಮತ್ತು ಸಮಗ್ರವಾದ ವಿವರವನ್ನು ಪಡೆದು ಆ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಉಳ್ಳಾಲ ಕ್ಷೇತ್ರದಲ್ಲಿ ಪೋಸ್ಟ್ ಮಾರ್ಟಮ್ ಸೆಂಟರ್ ಸರಿಯಾಗಿಲ್ಲ ಅದನ್ನು ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನಾಲ್ಕು ಗಂಟೆಯಾದರೂ ಪೋಸ್ಟ್ ಮಾರ್ಟಮ್ ಮಾಡಬೇಕೆಂದು ಹೇಳಿದ್ದಾರೆ. ಸೂರ್ಯ ಅಸ್ತಂಗತವಾದ ಮೇಲೆ ಸರಿಯಾಗಿ ಬೆಳಕಿನ ಕಿರಣ ಬೀಳದೇ ಇರುವುದರಿಂದ

ಮಾಡಬಾರದು ಎಂದು ಇದೆ. ಆದುದರಿಂದ ಸಂಜೆ ಆದ ಮೇಲೆ ಮಾಡುವುದಕ್ಕೆ ಅವಕಾಶವಿಲ್ಲ. ಅದನ್ನು ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿಗೆ ನೀರು

ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಉಪ ಸಭಾಧ್ಯಕ್ಷರೆ, ನಿಯೋಜಿತ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಕಳೆದ ಅಧಿವೇಶನದಲ್ಲೂ ಕೂಡ ನಾನು ಮಾತನಾಡಿದೆ, ಮಾನ್ಯ ಭಾರೀ ನೀರಾವರಿ ಸಚಿವರು ಮೊನ್ನೆ ಅಪ್ಪರ್ ಕೃಷ್ಣಕ್ಕೆ ಹೋದಾಗ ಹುಬ್ಬಳ್ಳಿಯಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಮಾಡಿದ್ದರು. ಈ ಯೋಜನೆ ಬಗ್ಗೆ ವಿವರವಾದ ಒಂದು ವರದಿಯನ್ನು ಅಂದಾಜು ಪಟ್ಟಿ ಮತ್ತು ತಃಖ್ತೆಯನ್ನು ಒಂದು ವಾರದಲ್ಲಿ ತಿಳಿಸುತ್ತೇನೆಂದು ತಾವು ಹುಬ್ಬಳ್ಳಿಗೆ ಹೋದಾಗ ಹೇಳಿದ್ದೀರಿ. ತಾವು ಇದಕ್ಕೆ ಈ ವರ್ಷ ಬಡ್ಜೆಟ್‌ನಲ್ಲಿಟ್ಟಿರುವ ದುಡ್ಡು ಕೇವಲ ನಾಲ್ಕೂವರೆ ಕೋಟಿ ರೂಪಾಯಿ. ತಾವು ಎರಡು ಸಾವಿರ ಇಸವಿ ಒಳಗಾಗಿ ಬಚಾವತ್ ಅವಾರ್ಡ್ ಪ್ರಕಾರ ಈ ತುಂಗಾ ಮೇಲ್ದಂಡೆ ಯೋಜನೆಯನ್ನು ಮುಗಿಸಬೇಕಾಗಿದೆ. ತಾವು ಹೆಚ್ಚು ಹಣವನ್ನು ಈ ಯೋಜನೆಗೆ ಕೊಡಬೇಕು. ಮತ್ತು ನೀರಾವರಿ ಬಾಂಡ್‌ಗಳನ್ನು ಆ ಭಾಗದ ರೈತರು ಖರೀದಿ ಮಾಡುವುದಕ್ಕೆ ತಯಾರಿದ್ದಾರೆ. ಯುಕೆಪಿಯಲ್ಲಿ ತಾವು ಯಾವ ರೀತಿಯಾಗಿ ಬಾಂಡ್‌ಗಳನ್ನು ಮಾಡಿದ್ದೀರಿ ಆ ರೀತಿ ನೀರಾವರಿ ಬಾಂಡ್‌ಗಳನ್ನು ಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು, ಮತ್ತು ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳನ್ನು ಸರ್ವೆ ಮಾಡಿಸಿ ನಿಯೋಜಿತ ಯೋಜನೆ ವ್ಯಾಪ್ತಿಯಲ್ಲಿ ಬರುವುದಾದರೆ ಅದನ್ನು ಮಾಡಿಕೊಡುತ್ತೇನೆ ಎನ್ನತಕ್ಕಂತಹ ಭರವಸೆಯನ್ನು ತಾವು ಕೊಟ್ಟಿದ್ದೀರಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖೇನ ಮಾನ್ಯ ಭಾರೀ ನೀರಾವರಿ ಸಚಿವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಖಾತೆ ಸಚಿವರು) : ಅವರಿಗೆ ಇರತಕ್ಕಂಥದ್ದು ಎರಡು ವಿಚಾರ, ಒಂದು ವಿಚಾರ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿಗೆ ಈ ನೀರು ಬರುತ್ತದೆಯೇ ಎನ್ನತಕ್ಕಂಥದ್ದೇ ಮೇಜರ್ ಇಷ್ಯೂ. ಆ ಎರಡು ತಾಲ್ಲೂಕುಗಳಿಗೆ ಇಲ್ಲ. ಮೊದಲನೆಯದು, ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳಿಗೆ ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರಾವರಿ ಒದಗಿಸಲು ಸಾಧ್ಯವಾಗುವುದಿಲ್ಲ. ಎರಡು ಲಕ್ಷದ ಮೂವತ್ತನಾಲ್ಕು ಎಕರೆ ನಿಗಧಿಯಾಗಿದೆ. 12.3 ಕೋಟಿಗೆ ಟಿಎಂಸಿಗೆ ನೀರು ಉಪಯೋಗಿಸಿಕೊಳ್ಳಬೇಕೆಂದು ಇಶ್ಯೂ ಮಾಡಿದ್ದೇವೆ. ನೆನ್ನೆ ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಘಟಪ್ರಭಾ ಮಲಪ್ರಭಾ ಅಪ್ಪರ್ ಕೃಷ್ಣ ಅಥವಾ ರಾಜ್ಯದಲ್ಲಿರತಕ್ಕಂತಹ ಇನ್ನಿತರ ನಿಧಾನವಾಗಿ ಹೋಗತಕ್ಕಂತಹ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಮುಗಿಸುವುದಕ್ಕೆ ಮಹಾರಾಷ್ಟ್ರದ ಮಾದರಿಯಲ್ಲಿ ಹಣವನ್ನು ವಸೂಲಿ ಮಾಡಿ ಯೋಜನೆ ಮುಕ್ತಾಯ ಮಾಡುತ್ತೇವೆ. ಅಡಿಷನಲ್ ಚೀಫ್ ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ತುಂಗಾ ಮೇಲ್ದಂಡೆ ಯೋಜನೆ ಯಾವ ರೀತಿ ಮಾಡಬೇಕೆಂದು ನಾವು ಕಮಿಟಿ ಮಾಡಿದ್ದೇವೆ. ಅವರು ಸಲಹೆ ಕೊಟ್ಟಿದ್ದಾರೆ, ಅವರ ಸಲಹೆ ಪ್ರಕಾರ ಅವರು ನೀರಾವರಿ ಬಾಂಡ್ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆಂದು ಹೇಳಿದ್ದಾರೆ, ಹಣವನ್ನು ಕ್ರೋಢೀಕರಿಸಿಕೊಂಡು ಯೋಜನೆ ಪ್ರಾರಂಭ ಮಾಡುತ್ತೇವೆ.